ಇದರಿಂದ ಜನಸಾಮಾನ್ಯರಿಗೆ ತೊಂದರೆ. ಬೇರೆಲ್ಲೂ ಸಿಕ್ಕದ ಪಶ್ಚಿಮ ಘಟ್ಟದ ಪ್ರಕೃತಿ ಸೌಂದರ್ಯ ಸವಿಯಲು, ಸುಬ್ರಮಣ್ಯ ಬೇಲೂರು ನೋಡಲು ಒಂದು ಹಗಲು ಪ್ರಯಾಣದ ಟ್ರೈನ್ ಬೇಕು, ಹಾಗೂ ಬೆಂಗಳೂರಿಗೆ ರಾತ್ರಿ ಇನ್ನೊಂದು ಟ್ರೈನ್ ವ್ಯವಸ್ಥೆ ಮಾಡಬೇಕು. ಟ್ರೈನ್ ಪ್ರಯಾಣದ ವೇಳೆ ಕಡಿಮೆ ಮಾಡಬೇಕು. ಕಡಿಮೆ ವೇಳೆಯಲ್ಲಿ ಪ್ರಯಾಣಕ್ಕೆ ಕನಿಷ್ಟ ೩ ಟ್ರೈನ್ ಆದರೂ ಬೇಕು. ಈ ವಿಚಾರದಲ್ಲಿ ಕೇಂದ್ರ ಸರ್ಕಾರವನ್ನು ರಾಜ್ಯ ಸರ್ಕಾರ ಒತ್ತಾಯಿಸಬೇಕೆಂದು ದಕ್ಷಿಣ ಕನ್ನಡದ ಜನತೆಯ ಪರವಾಗಿ ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಮನವಿಯನ್ನು ಕಳುಹಿಸುತ್ತೇನೆ.

14) ಕುಂದಾಪುರ ತಾಲ್ಲೂಕಿನ ಸೈಯದ್ ಯೂಸೂಫ್ ಮಯ್ಯೊಲ ದರ್ಗಾ ಧರ್ಮಗಂರುಗಳ ಮನೆ ಸಂಪೂರ್ಣವಾಗಿ ಸುಟ್ಟು ಹೋಗಿರುವ ಬಗ್ಗೆ

ಶ್ರೀ ಪ್ರತಾಪ ಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೆ, ಕುಂದಾಪುರ ತಾಲ್ಲೂಕಿನ, ಪುರಸಭೆಯ ವ್ಯಾಪ್ತಿಯಲ್ಲಿರುವ ಸೆಯ್ಯದ್ ಯೂಸುಫ್ ವಲಿಯುಲ್ಲಾ ದರ್ಗಾದ ಸ್ವಾಧೀನದಲ್ಲಿರತಕ್ಕಂತಹ ಧರ್ಮ ಗುರುಗಳು ವಾಸವಾಗಿರುವಂತಹ ಮನೆ ೨೨-೫-೮೮ ರಂದು ಮಧ್ಯಾಹ್ನ ೧೧-೨೦ ಗಂಟೆಗೆ ಬೆಂಕಿ ಅಕಸ್ಮಿಕದಿಂದ ಸಂಪೂರ್ಣ ಸುಟ್ಟು ಹೋಗಿರುತ್ತದೆ. ಮನೆಯಲ್ಲಿದ್ದ ದರ್ಗಾ ತಾಪ್ರದ ಎಲ್ಲಾ ಪಾತ್ರೆಗಳು ೨೫ ಸಾವಿರ ರೂಪಾಯಿಗಳು, ಬಟ್ಟೆ ಬರೆ ಸುಮಾರು ೫ ಸಾವಿರ ರೂಪಾಯಿ, ನಗದು ಸುಮಾರು ೧೦ ಸಾವಿರ ರೂಪಾಯಿ, ಮಂತ್ರ ಕುರ್ಜಿ ಮೇಜು ಎಲ್ಲಾ ದರ್ಗಾ ಸಾಮಾನುಗಳು ಸುಟ್ಟು ಹೋಗಿವೆ. ಸುಮಾರು ಇದರಿಂದ ೧ ಲಕ್ಷ ೨೦ ಸಾವಿರ ರೂಪಾಯಿಗಳು ನಷ್ಟವಾಗುತ್ತದೆ.

ಆದ ಕಾರಣ ಸರಕಾರ ಮಾನ್ಯ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಪರಿಹಾರ ಒದಗಿಸಿ ಕೊಡಬೇಕಾಗಿ ಸರಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಪರದಿಯನ್ನು ತರಿಸಿಕೊಡುತ್ತೇನೆ. ಮಾನ್ಯ ಸದಸ್ಯರಾದ ಶ್ರೀಮಾನ್ ಪ್ರತಾಪ ಚಂದ್ರಶೆಟ್ಟಿಯವರಿಗೂ ವಿಷಯ ಗೊತ್ತಿದೆ. ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಭೇಟಿ ಕೊಟ್ಟು ಬೆಂಕಿ ಅನಾಹುತವಾಯಿತು ಅಂತ ಹೇಳಿದ್ದಾರೆ. ಅವರು ಸ್ಥಳ ಪರಿಶೀಲನೆ ಮಾಡಿ ಈಗ ಹಾಲಿ ಇರತಕ್ಕ ನಿಯಮಾವಳಿಗಳ ಪ್ರಕಾರ ಪರಿಹಾರವನ್ನು ಕೊಡುವುದಕ್ಕೆ ಅವಕಾಶ ಇದೆ. ಆದರೂ ಪರಿಹಾರ ಸಿಕ್ಕದಿದ್ದರೆ ನಾಳೆಯೋ ಆಥವಾ ನಾಡಿದ್ದೋ ತಿಳಿಸಿದರೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

15) ಕುಟುಂಬ ಕಲ್ಯಾಣ ಇಲಾಖೆಯ ಉಡಳಿತಾಧಿಕಾರಿ ಶ್ರೀ ಜೋಷಿ ಅವರ ಮೇಲೆ ದೂರುಗಳನ್ನು ಗಮನಿಸಿ ಅಮಾನತ್ತಿನಲಿಡುವುದರ ಬಗ್ಗೆ

ಶ್ರೀ ಬಿ. ಸ್ವಾಮಿ ರಾವ್.— ಮಾನ್ಯ ಅಧ್ಯಕ್ಷರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಉಡಳಿತಾಧಿಕಾರಿಯಾಗಿ, ಕೆಲಸ ಮಾಡುತ್ತಿರುವ ಶ್ರೀ ಜೋಷಿ ಅವರ ಮೇಲೆ ವೈಯಕ್ತಿಕವಾಗಿ ಹಾಗೂ ಸಂಘಗಳ ಮೂಲಕ ಅನೇಕರು ದೂರು ಸಲ್ಲಿಸಿದ್ದು ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟ ಕಡತ ಹೋದ ಸಂದರ್ಭದಲ್ಲಿ ಮೇಲ್ನೋಟಕ್ಕೆ ಅವರ ಮೇಲಿನ ಆಪಾದನೆಗಳು ನಿಜವೆಂದು ಕಂಡು ಬಂದಿದ್ದರಿಂದ, ಮಾನ್ಯ ಮುಖ್ಯಮಂತ್ರಿಗಳು ಅವರ ಮೇಲೆ ಇಲಾಖಾ ವಿಚಾರಣೆಯನ್ನು ನಡೆಸಬೇಕೆಂದು ೯-೫-೮೮ರಂದು ಆದೇಶ ನೀಡಿದ್ದಾಗ್ಯೂ ಸದರಿ ಕಡತ ಸಚಿವಾಲಯದ ಆರೋಗ್ಯ ಕಾರ್ಯದರ್ಶಿಗಳ ಕಛೇರಿಯಲ್ಲೇ ಉಳಿದಿರುವುದಾಗಿ ತಿಳಿದು ಬಂದಿದೆ. ಇದರ ಮೇಲೆ ಅನೇಕ ಭ್ರಷ್ಟಾಚಾರ ಪ್ರಕರಣಗಳು ಹಾಗೂ ಅಧಿಕಾರದುರುಪಯೋಗದ ಪ್ರಕರಣಗಳು ಬಹಳ ಇದ್ದು, ಇವರ ಬಗ್ಗೆ ಕೂಲಂಕಷವಾದ ತಳಿಪೆ ನಡೆದು ಅದರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುವ ಅವಶ್ಯಕತೆ ಇದ್ದಾಗ್ಯೂ ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯದಲ್ಲಿ ನಿರಾಸಕ್ತಿ ಹೊಂದಿದ್ದಾರೆ. ಇವರ ಭ್ರಷ್ಟಾಚಾರದ ಬಗ್ಗೆ ಒಂದು ನಿದರ್ಶನ ಕೊಡುವುದಾದರೆ ಇಲಾಖೆಯಲ್ಲಿ ಸ್ಟಾಫ್ ನರ್ಸಗಳಾಗಿ ಕೆಲಸ ಮಾಡುತ್ತಿದ್ದ ೩೬ ಮಂದಿ ಇಲಾಖಾ ಅನುಮತಿ ಇಲ್ಲದೆ ಸೌದಿ ಅರೇಬಿಯಾಕ್ಕೆ ಹೋಗಿ ಹಿಂದಿರುಗಿದ ನಂತರ ಅವರ ಮೇಲೆ ವಿಚಾರಣೆ ನಡೆಸಬೇಕೆಂದು ಆದೇಶ ಇದ್ದಾಗ್ಯೂ, ವಿಚಾರಣೆ ನಡೆಸದೆ ಅವರಿಂದ ಲಂಚ ಪಡೆದು ಅವರನ್ನು ಪುನಃ ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ಇಂತಹ ಪ್ರಕರಣಗಳು

ಬೇಕಾದಷ್ಟಿದ್ದು ವಿನಾಕಾರಣ ಇಲಾಖಾ ಅಧಿಕಾರಿಗಳಿಗೆ, ವೈದ್ಯರುಗಳಿಗೆ ತೊಂದರೆ ಕೊಟ್ಟಿರುವ ಪ್ರಕರಣಗಳು ಸಾಕಷ್ಟಿದೆ. ಇದರ ಕೆಲಸದ ವೈಖರಿ ಹೇಗೆಂದರೆ ಅವರಿಗೆ ಬೇಡವಾದವರನ್ನು ಕೂಡಲೇ ವಿನಾಕಾರಣ ಅಮಾನತ್ತಿನಲ್ಲಿಡುವುದು ಮತ್ತು ಅವರಿಗೆ ತೊಂದರೆ ಕೊಡುವುದು. ಹೀಗಿರುವುದರಿಂದ ಈ ಅಧಿಕಾರಿಯನ್ನು ಕೂಡಲೇ ಅಮಾನತ್ತಿನಲ್ಲಿರಿಸಿ, ಇವರನ್ನು ಮುಖ್ಯಮಂತ್ರಿಯವರ ಆಜ್ಞೆಯ ಪ್ರಕಾರ ಇಲಾಖಾ ವಿಚಾರಣೆಗೆ ಒಳಪಡಿಸುವುದಲ್ಲದೆ, ಇವರ ಪ್ರಕರಣವನ್ನು ಸಿ.ಓ.ಡಿ.ಗೆ ವಹಿಸಿ ಕೂಲಂಕಷ ತನಿಖೆ ನಡೆಸಬೇಕೆಂದು ಮಾನ್ಯ ಆರೋಗ್ಯ ಸಚಿವರನ್ನು ಒತ್ತಾಯಿಸಿ ಈ ಬಗ್ಗೆ ಸದನದಲ್ಲಿ ಹೇಳಿಕೆ ನೀಡಬೇಕೆಂದು ಆಗ್ರಹಪಡಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಮಾನ್ಯ ಆರೋಗ್ಯ ಸಚಿವರು).—ಅಧ್ಯಕ್ಷರೇ, ಶ್ರೀ ಕೆ.ಪಿ. ರಾಜನ್ ಫಿಜಿಯೋಥೆರಾಪಿಸ್ಟ್, ಸರ್ಕಾರಿ ಕುಷ್ಠರೋಗ ನಿವಾರಣಾ ಆಸ್ಪತ್ರೆ ಮಾಗಡಿ ರಸ್ತೆ, ಬೆಂಗಳೂರು ಇವರು ದಿನಾಂಕ ೪-೫-೧೯೮೮ ರಂದು ಮಾನ್ಯ ಮುಖ್ಯಮಂತ್ರಿಯವರಿಗೆ ಒಂದು ದೂರು ಅರ್ಜಿ ಕೊಟ್ಟು ಶ್ರೀ ಜೆ.ಎಸ್. ಜೋಷಿ ಆಡಳಿತ ಅಧಿಕಾರಿ ಆರೋಗ್ಯ ಮಂತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ ಇವರ ಮೇಲೆ ಆಪಾದನೆ ಮಾಡಿದ್ದಾರೆ. ಈ ಆಪಾದನೆಗಳನ್ನು ಸಂಕ್ಷಿಪ್ತವಾಗಿ ಈ ಕೆಳಗೆ ಕೊಡಲಾಗಿದೆ.

೧. ಶ್ರೀ ಜೋಷಿಯವರನ್ನು ಶ್ರೀ ಕೆ.ಪಿ. ರಾಜನ್‌ರವರ ಮೇಲಿದ್ದ ವಿಚಾರಣೆ ಪ್ರಕರಣದಲ್ಲಿ ವಿಚಾರಣಾಧಿಕಾರಿಯಾಗಿ ನೇಮಿಸಲಾಗಿತ್ತು. ವಿಚಾರಣಾ ಸಮಯದಲ್ಲಿ ಶ್ರೀ ಜೋಷಿಯವರು ೪ ಪ್ರತ್ಯೇಕ ಸಾಕ್ಷಿಗಳನ್ನು ಕಾಡಿಸಿ ಬೇಡಿಸಿ, ಅವರು ಹೇಳಿಕೆ ಕೊಡದಂತೆ ಮಾಡಿರುತ್ತಾರೆ.

೨. ಶ್ರೀ ಎಂ. ಜೋಷಿಯವರು ತಮ್ಮ ವೈಕ್ತಿಕತ್ವವಾಗಿ ಸುಳ್ಳು ಮಾಹಿತಿ ಸಂಗ್ರಹಿಸಿ ನಿರ್ದೇಶಕರನ್ನು ತಪ್ಪು ದಾರಿಗೆಳೆದು, ತಮ್ಮನ್ನು ಅಮಾನತ್ತಿನಲ್ಲಿಡುವಲ್ಲಿ ಕಾರಣಕರ್ತ ವಾಗಿದ್ದಾರೆ.

ಸದರಿ ದೂರು ಅರ್ಜಿಬಗ್ಗೆ ಇಲಾಖಾ ವಿಚಾರಣೆ ಮಾಡಿಸಲು ಮುಖ್ಯಮಂತ್ರಿಯವರು ಆದೇಶಿಸಿರುತ್ತಾರೆ. ಈ ಆದೇಶವನ್ನು ಮುಖ್ಯ ಮಂತ್ರಿಯವರ ಜಂಟಿ ಕಾರ್ಯದರ್ಶಿಯವರ ಮೂಲಕ ದಿನಾಂಕ ೧೭-೫-೧೯೮೮ರಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಂಬಂಧಪಟ್ಟ ಶಾಖೆಯಲ್ಲಿ ಸ್ವೀಕೃತವಾಗಿದೆ. ಇದಲ್ಲದೇ ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಲಿಪಿಕ ನೌಕರರ ಸಂಘದ ವತಿಯಿಂದಲೂ ಶ್ರೀ ಜೋಷಿಯವರ ಮೇಲೆ ದೋಷಾರೋಪಣೆ ಅರ್ಜಿ ಬಂದಿದೆ. ಇದರಲ್ಲಿ ಈ ಕೆಳಕಂಡ ಆರೋಪಗಳಿವೆ.

೧. ಶ್ರೀ ಜೋಷಿಯವರು ಸರ್ಕಾರಿ ವಾಹನವನ್ನು ತಮ್ಮ ಸ್ವಂತಕ್ಕೆ ಉಪಯೋಗಿಸುತ್ತಿದ್ದಾರೆ.

೨. ಇವರು ಬಹಳಷ್ಟು ಕಡತಗಳನ್ನು ಬಾಕಿ ಇಟ್ಟಿದ್ದಾರೆ.

೩. ಇವರು ವಿಚಾರಣಾಧಿಕಾರಿಯಾಗಿ ೩೬ ಜನ ಆನಧಿಕೃತ ಗೈರುಹಾಜರಾಗಿದ್ದ ನೌಕರರಿಗೆ ಇಲಾಖಾ ವಿಚಾರಣೆಯನ್ನು ಕಾದಿರಿಸಿ ಪುನರ್ ನೇಮಕ ಮಾಡಲು ಶಿಫಾರಸು ಮಾಡಿದ್ದಾರೆ.

ಈ ಆಪಾದನೆಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ವಿವರವಾದ ವರದಿಯೊಂದಿಗೆ ದೋಷಾರೋಪಣೆ ಪಟ್ಟಿ ತಯಾರಿಸಿ ಕಳುಹಿಸಲು ನಿರ್ದೇಶಕರಿಗೆ ದಿನಾಂಕ ೨೪-೫-೮೮ ರಂದು ಒಂದು ರಹಸ್ಯ ಪತ್ರ ಬರೆಯಲಾಗಿದೆ.

ಸದರಿ ದೂರು ಅರ್ಜಿಗಳು ಇಲಾಖೆಯಸಂಬಂಧಪಟ್ಟ ಶಾಖೆಯಲ್ಲಿ ದಿನಾಂಕ ೧೭-೫-೧೯೮೮ ಹಾಗೂ ೪-೫-೧೯೮೮ ರಂದು ಸ್ವೀಕೃತವಾಗಿದ್ದು, ಅವುಗಳನ್ನು ಕಾರ್ಯದರ್ಶಿಯವರಿಗೆ ಕಡತದಲ್ಲಿ ಮಂಡಿಸಿ, ಅವರ ಅವಗಾಹನೆಯ ನಂತರ ದಿನಾಂಕ ೨೪-೫-೧೯೮೮ ರಂದು ನಿರ್ದೇಶಕರಿಗೆ ಪತ್ರ ಹೊರಡಿಸಲಾಗಿದೆ.

ಭ್ರಷ್ಟಾಚಾರದ ಬಗ್ಗೆ ಯಾರಾ ಹಣ ಕೊಟ್ಟರು ಎಂಬ ಬಗ್ಗೆ ಸ್ಪಷ್ಟ ಮಾಹಿತಿ ಕೊಟ್ಟಿಲ್ಲ, ಮೇಲೆ ತಿಳಿಸಿದ ಆರೋಪಗಳನ್ನು ಗಮನಿಸಿದಾಗ ಇವರು ದೂರುಗಳಿಗೆ ಸಂಬಂಧಿಸಿದ ದಾಖಲೆಗಳನ್ನು ದುರುದ್ದೇಶದಿಂದ ತಿದ್ದುವ ಪ್ರಕರಣ ಯಾವುದೂ ಕಂಡುಬರುವುದಿಲ್ಲ. ಈ ಕಾರಣದಿಂದ ಇವರನ್ನು

ಅವಮಾನತ್ತಿನಲ್ಲಿರುವ ಅವಶ್ಯಕತೆ ಕಂಡುಬರುವುದಿಲ್ಲ. ನಿರ್ದೇಶಕರಿಂದ ವಿವರವಾದ ವರದಿ ಹಾಗೂ ದೋಷಾರೋಪಣೆ ಪಟ್ಟಿ ಬೇಗ ತರಿಸಿ ವಿಚಾರಣಾ ಅಧಿಕಾರಿಯನ್ನು ಉಪಲೋಕಾಯುಕ್ತರ ಮೂಲಕ ನೇಮಿಸಲಾಗುವುದು.

೧೭) ಹಿರಿಯೂರು ತಾಲ್ಲೂಕಿನ ವಕ್ಕಲಿ ಗ್ರಾಮದಲ್ಲಿ ರಾಷ್ಟ್ರೀಯ ಎಣ್ಣೆಕಾಳು ಸಂಘದ ಅಧ್ಯಕ್ಷರು ಡಿಫಾಲ್ಟರ್ ಆಗಿದ್ದರೂ ಅದೇ ಹುದ್ದೆಯಲ್ಲಿ ಮುಂದುವರಿಯುತ್ತಿರುವುದರ ಬಗ್ಗೆ.

ಶ್ರೀ ಆರ್. ರಾಮಯ್ಯ.—ಮಾನ್ಯ ಅಧ್ಯಕ್ಷರೇ, ಹಿರಿಯೂರು ತಾಲ್ಲೂಕಿನ ಮಸ್ಕಲ್ ಗ್ರಾಮದಲ್ಲಿ ಇತ್ತೀಚೆಗೆ ''ರಾಷ್ಟ್ರೀಯ ಎಣ್ಣೆಕಾಳು ಅಭಿವೃದ್ಧಿ ಸಹಕಾರ ಸಂಘ'' ಹೊಂದು ತಲೆ ಎತ್ತಿದೆ. ಇದರ ಅಧ್ಯಕ್ಷರು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ ಬಿಂದರಲ್ಲಿ 'ಡಿಫಾಲ್ಟರ್' ಆಗಿದ್ದು ಸಹ ಸಂಘದ ಅಧ್ಯಕ್ಷರಾಗಿ ಮುಂದುವರಿಯುತ್ತಿರುವುದು ಸಹಕಾರ ಸಂಘಗಳ ನಿಯಮಕ್ಕೆ ವಿರುದ್ಧವಾಗಿದೆ. ಇದರ ವಿಚಾರಣೆಯನ್ನು ಸಮಯ ಕಳೆಯುವುದಕ್ಕಾಗಿಯೇ ವ್ಯವಸ್ಥೆ ಮಾಡಿದ ರಾಜಕೀಯ ಪ್ರಭಾವ ವಿದೆ. ಪ್ರಯುಕ್ತ ಸರ್ಕಾರ ಕೂಡಲೇ ಈ ಅಧ್ಯಕ್ಷರ ಪದಚ್ಯುತಿ ಆದೇಶಿಸಲು ಕೋರುತ್ತೇನೆ.

ಶ್ರೀ ಎಚ್. ವಿಶ್ವನಾಥಯ್ಯ (ಸಹಕಾರ ಮಂತ್ರಿಯವರು).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಸಹಕಾರಿ ಸಂಘದ ಅಧ್ಯಕ್ಷರ ಅನರ್ಹತೆ ಬಗ್ಗೆ ವಿಚಾರಣೆ ನಡೆಯುತ್ತಿದೆ. ಅದರ ವಿಳಂಬಕ್ಕೆ ರಾಜಕೀಯ ಪ್ರಭಾವ ಕಾರಣ ಎಂದು ಹೇಳುವುದು ಸರಿಯಲ್ಲ. ನಿಯಮಾವಳಿಗಳನ್ನು ಅನುಸರಿಸಿ ವಿಚಾರಣೆ ಮಾಡಿ ತ್ವರಿತಗತಿಯಲ್ಲಿ ಅಂತಿಮ ತೀರ್ಮಾನ ಕೊಡಲು ಸೂಚನೆಯನ್ನು ಕೊಡುತ್ತೇನೆ.

೧೮) ರಾಜ್ಯದಿಂದ ಹೋಗುವ ಹಜ್ ಯಾತ್ರಿಕರಿಗೆ ಜಿಲ್ಲಾ ಆಸ್ಪತ್ರೆಗಳಿಂದ ಚುಚ್ಚು ಮದ್ದು ಹಾಕಿಸುವಂತೆ ವ್ಯವಸ್ಥೆ ಮಾಡುವುದರ ಬಗ್ಗೆ.

SRI MOHAMMED LAIQUDDIN.—Sir, the muslims from all over our State pay visit to holy cities of Mecca and Madina in the Kingdom of Shudi Arabia, during the period of their Haj Pilligrimage. All Hajis are required to get inoculations before starting for the performance of the Haj. This year the Government of Karnataka has made condition that all Hajis should get vaccinations and inoculations at Bangalore proper and then proceed to the holy places where the religious observances of Haj are offered.

The above condition is very hard, highly inconvenient and causes great harassment to the Hajis. The persons who are going to undertake Haj piligrimage from the Districts, viz. Bidar, Gulbarga, Raichur, Dharwar, Belgaum, Bijpur etc., which are far away from the capital city of Bangalore are also required to undergo the trial of getting inoculations at Bangalore. In this way they are forced not only to spend lot of money and energy, but also suffer great hardships. The travel for the ladies, aged and poor persons for the said purpose will amount to a sort of harassment and takes away all their physical strength and also causes mental irritation and exhaustion. I therefore sincerly urge upon the Government to remove the above unreasonably punitive